**<u>ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಕೆ ಕೆ ವಕೀಲರಿಂದಃ-</u>**

1. ಈ ಕೇಸಿನಲ್ಲಿ ಸಾಕ್ಷಿದಾರರಾಗಿ ಪ್ರಮಾಣ ಪತ್ರ ಸಲ್ಲಿಸಿರುವ ನಿಂಗರಾಜು ತಮಗೆ ಎಷ್ಟು ವರ್ಷದಿಂದ ಗೊತ್ತು ಎಂದರೆ ಸಾಕ್ಷಿ ಸುಮಾರು 25 ವರ್ಷಗಳಿಂದು ಎನ್ನುತ್ತಾರೆ. ತಿಟ್ಟಮಾರನಹಳ್ಳಿ ಗ್ರಾಮದಿಂದ ಎಲೆ ಹೊಸೂರು ಸುಮಾರು 9 ಕಿ ಮೀ ದೂರ ಇದೆ ಎಂದರೆ ಸರಿ. ನಾನು ದ್ವಿತೀಯ ಪಿಯುಸಿವರೆಗೂ ಓದಿರುತ್ತೇನೆ. ಮೃತ ನನ್ನ ಗಂಡ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಪೇದೆಯಲ್ಲಿ ಕೆಲಸದಲ್ಲಿ ಇದ್ದರು. ಗಂಡ ಸತ್ತ ನಂತರ ನನ್ನ ಗಂಡನಿಗೆ ಸರ್ಕಾರದಿಂದ ಬರಬೇಕಾಗಿದ್ದ ಸವಲತ್ತು ಪಡೆದಿರುತ್ತೇನೆ ಎಂದರೆ ಸರಿ. ತಮಗೆ ಮಾಸಿಕ ಪಿಂಚಣಿ ಎಷ್ಟು ಬರುತ್ತದೆ ಎಂದರೆ ರೂ.13000/- ಎನ್ನುತ್ತಾರೆ. ನನ್ನ ಗಂಡ ತೀರೀಕೊಂಡ ನಂತರ ಅನುಕಂಪದ ಆಧಾರದ ಮೇಲೆ ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ ದಾಖಲೆಗಳು ಲೋಪ ದೋಷಗಳಿಂದ ಕೂಡಿದೆ ಎಂದು ನನ್ನ ಅರ್ಜಿ ವಜಾ ಆಗಿದೆ ಎಂದರೆ ಸರಿ.

2. ನನ್ನ ಗಂಡ ರೂ.160000/- ಗಳಿಗೆ ಎಲ್ ಐ ಸಿ ಮಾಡಿಸಿದ್ದರು ಎಂದರೆ ಸರಿ. ಸದರಿ ಪಾಲಿಸಿಯಲ್ಲಿ ನನ್ನ ಅತ್ತೆ ವಾದಿಯನ್ನು ನಾಮಿನಿ ಮಾಡಲಾಗಿತ್ತು ಎಂದರೆ ಸರಿ. ಸದರಿ ಎಲ್ ಐ ಸಿ ಹಣ ನನಗೆ ಬರಬೇಕೆಂದು ನಾನು ನ್ಯಾಯಾಲಯದಲ್ಲಿ ಕೇಸು ದಾಖಲು ಮಾಡಿದ್ದೆ ಎಂದರೆ ಸರಿ. ನನ್ನ ಮತ್ತು ಅತ್ತೆಯ ನಡುವೆ ಮಾತು ಕತೆ ಇಲ್ಲ ಎಂದರೆ ಸರಿ. ವಾದಿ ಎಲೆ ಹೊಸಹಳ್ಳಿ ಗ್ರಾಮದಲ್ಲಿ ಒಬ್ಬರೆ ವಾಸ ಇದ್ದಾರೆ ಎಂದರೆ ಸರಿ. ವಾದಿಯ ಮನೆಯ ಹತ್ತಿರ ಅವರಿಗೆ ಸೇರಿದ ಜಮೀನಿನಲ್ಲಿ ಜಿಯೋ ಟವರ್ ನಿರ್ಮಾಣ ಮಾಡಿದ್ದು ಅದರಿಂದ ಮಾಸಿಕ ರೂ.4500/- ಬಾಡಿಗೆ ಹಣ ಬಿಟ್ಟರೆ ಬೇರೆ ಆದಾಯ ಇಲ್ಲ ಎಂದರೆ ಸಾಕ್ಷಿ ಮಾಸಿಕ

ಆದಾಯ ರೂ.8000/- ಬರುತ್ತದೆ ಎನ್ನುತ್ತಾರೆ. ನನ್ನ ಗಂಡ ಸತ್ತ ನಂತರ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ವಾಸ ಇರುವಂತೆ ನನಗೆ 5-6 ಲಕ್ಷ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ.

3. ವಾದಿಯಿಂದ 5-6 ಲಕ್ಷ ಹಣ ಪಡೆದು ಚನ್ನಪಟ್ಟಣ ಟೌನ್ ನಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸಾಕ್ಷಿ ನನ್ನ ಗಂಡ ಇದ್ದಾಗಲೇ ಚನ್ನಪಟ್ಟಣ ಟೌನ್ ನಲ್ಲಿ ಮನೆ ಕಟ್ಟಿಸಿದ್ದರು ಎನ್ನುತ್ತಾರೆ. ಪ್ರತಿವಾದಿ ರಾಜು ವಾದಿಗೆ 3 ಲಕ್ಷ ಹಣವನ್ನು ಭೋಗ್ಯದ ಹಣವಾಗಿ ಕೊಟ್ಟಿದ್ದಾರೆ ಎಂದು ಹೇಳಿದ್ದು ದಾಖಲೆ ಇವೆಯಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಕೊಟ್ಟಿರುವುದನ್ನು ನೋಡಿದ್ದೇನೆ ಎನ್ನುತ್ತಾರೆ. ವಾದಿಯಿಂದ ಪಡೆದಿರುವ 5-6 ಲಕ್ಷ ಹಣವನ್ನು ವಾಪಸ್ಸು ಕೊಡಬೇಕಾಗಿರುತ್ತದೆ ಎಂದು ಪ್ರತಿವಾದಿಯ ಪರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ವಾದಿಗೆ ಮಾನಸಿಕವಾಗಿ ತೊಂದರೆ ಕೊಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ